INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -5, September-October, 2023,
PageNo,87-97
Peer -Reviewed, Refereed Journal

# ರಾಯಚೂರು ಜಿಲ್ಲೆಯ ಬೇಟೆ ಸ್ಮಾರಕಶಿಲ್ಪಗಳು

ಕರಿಯಪ್ಪ.[1]

**ಭಾರತದಲ್ಲಿ** ಬೇಟೆ ಸ್ಮಾರಕಶಿಲ್ಪಗಳು ಎರಡು ರೀತಿಗಳಲ್ಲಿ ಬೆಳೆದುಬಂದಿರುವುದನ್ನು ಗಮನಿಸಬಹುದು. ಮೊದಲನೆಯದು ಮಾನವನು ಜೀವನ ನಿರ್ವಹಣೆಯ ಸಲುವಾಗಿ ತಾನು ಬೆಳೆದ ಬೆಳೆಗಳನ್ನು ಸಂರಕ್ಷಣೆ ಮಾಡುವ ಉದ್ದೇಶದಿಂದ ಕಾಡು ಪ್ರಾಣಿಗಳನ್ನು ಬೇಟೆಯನ್ನು ಆಡುತ್ತಿದ್ದನು. ಎರಡನೆಯದಾಗಿ ರಾಜಮನೆತನದ ಅರಸರು, ಮಾಂಡಲೀಕರು ವಿಹಾರಾರ್ಥವಾಗಿ, ಮೋಜಿಗಾಗಿ ಬೇಟೆ ಆಡುತ್ತಿದ್ದ ಸಂಗತಿಗಳು ಕಂಡುಬರುತ್ತದೆ. ಇದರ ಜೊತೆಯಲ್ಲಿ ಮಾನವನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ನಿಗದಿಯಾದ ಸಮಯದಲ್ಲಿ, ನಿಗದಿತವಾದ ಸ್ಥಳದಲ್ಲಿ ಬೇಟೆಯಾಡುತ್ತಿದ್ದನು. ವೀರಗಲ್ಲುಗಳಿಂದ ಮೊದಲನೆಯದಾಗಿ ಬೇಟೆಯ ಬಗ್ಗೆ ಮಾಹಿತಿ ಕಂಡುಬಂದರೆ, ಕಾವ್ಯಗಳಲ್ಲಿ ಎರಡನೆಯದಾಗಿ ಕವಿಗಳು ರಚಿಸಿದ ಕಾವ್ಯಗಳಿಂದ ಬೇಟೆಯ ಸ್ಮಾರಕಶಿಲ್ಪಗಳ ಬಗ್ಗೆ ತಿಳಿದುಬರುತ್ತದೆ. ಭಾರತದಲ್ಲಿ ರಾಜ್ಯವಾಳಿದ ಅನೇಕಾನೇಕ ಅರಸುಗಳಿಗೆ ಬೇಟೆಯೆಂಬುದು ಬಹಳ ಪ್ರೀಯವಾದ ಮತ್ತು ತಮ್ಮ ಶಸ್ತ್ರಪ್ರಯೋಗ ಪರಿಣತಿಯ ಪ್ರೌಢಿಮೆಯನ್ನು ಪ್ರಕಾಶ ಪಡಿಸುವ ಕ್ರೀಡೆಯಾಗಿತ್ತು ಎಂಬುದು ತಿಳಿದುಬರುತ್ತದೆ.

ಕರ್ನಾಟಕದಲ್ಲಿ ನಮಗೆ ಪ್ರಚಲಿತವಿರುವ ಬೇಟೆಯ ಸ್ಮಾರಕಶಿಲ್ಪಗಳ ವಿವರಗಳನ್ನು ತಿಳಿಯಲು ಇರುವ ಮೂಲ ಸಾಮಗ್ರಿಗಳೆಂದರೆ ವೀರಗಲ್ಲುಗಳು. ಇವುಗಳನ್ನು ವಿವರಿಸುವ ಕನ್ನಡ ಕಾವ್ಯಗಳಲ್ಲಿ ಬರುವ ಬೇಟೆಯ ವರ್ಣಣೆಯನ್ನು ಉಪಯೋಗಿಸಿಕೊಳ್ಳಬೇಕಾಗಿದೆ. ಬೇಟೆ ವೀರಗಲ್ಲುಗಳು ಅಷ್ಟೆ ಅಲ್ಲದೆ ನಾಣ್ಯ, ಕೈಫಿಯತ್ತುಗಳಲ್ಲೂ ಬೇಟೆಯ ಬಗ್ಗೆ ಉಲ್ಲೇಖಗಳು ಕಂಡುಬರುತ್ತವೆ. ಕರ್ನಾಟಕದಲ್ಲಿ ಆಳ್ವಿಕೆ ಮಾಡಿದ ಅರಸು ತಮ್ಮ ನಾಣ್ಯಗಳಲ್ಲಿ ತಮ್ಮ ಕಾಲದ ಪ್ರಚಲಿತವಿದ್ದ ಬೇಟೆಚಿತ್ರಗಳನ್ನು ಠಂಕಿಸಿದ್ದಾರೆ. ಗುಪ್ತರ ಕಾಲದಲ್ಲಿ ನಾಣ್ಯಗಳಲ್ಲಿ ಮನುಷ್ಯನು ಹುಲಿಯೊಡನೆ ಹೋರಾಡುವ ಚಿತ್ರವಿದೆ. ಕೈಫಿಯತ್ತುಗಳಲ್ಲಿ ಮುಮ್ಮಡಿ ಸಿಂಹನ ಮಗನಾದ ಕಂಪಿಲರಾಯನೆಂಬುವವನು ಹೆಬ್ಬುಲಿಯನ್ನು ಕೊಂದಿದ್ದಕ್ಕೆ ಪ್ರತಿಯಾಗಿ ಅವನಿಗೆ

[1].ಸಂಶೋಧನಾ ವಿದ್ಯಾರ್ಥಿ,ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ ಕನ್ನಡ ವಿಶ್ವವಿದ್ಯಾಲಯ,ಹಂಪಿ.

ದೇವಗಿರಿಯ ರಾಮದೇವರಾಯನು 'ಹೆಬ್ಬುಲಿ ಕಂಪಿಲರಾಯ ಸಹಸ್ರರಾಯರ ಗಂಡ' ಎಂಬ ಬಿರುದು ನೀಡಿದ ವಿಷಯ ತಿಳಿದುಬರುತ್ತದೆ.

ಬೇಟೆಯನ್ನಾಡುವ ವಿಧಾನಗಳ ಬಗ್ಗೆ ವಿವರವಾದ ಮಾಹಿತಿಯನ್ನು ನೀಡುವ ಯಾವ ಶಾಸ್ತ್ರಗ್ರಂಥಗಳೂ ಕಂಡುಬಂದಿರುವುದಿಲ್ಲ. ಪ್ರಾಚೀನ ಸಾಹಿತ್ಯ ಹಾಗೂ ಬೇಟೆ ಕುರಿತ ಮಾಹಿತಿ ಗ್ರಂಥಗಳಲ್ಲಿ ಬೇಟೆಯಾಡುವ ವಿಧಾನವನ್ನು ಗಮನದಲ್ಲಿಟ್ಟುಕೊಂಡು ಬೇಟೆಯನ್ನು ಈ ರೀತಿ ವಿಭಾಗ ಮಾಡುತ್ತಾರೆ.

೧. **ಅಶ್ವಿನಿ** – ಕುದುರೆಯ ಮೇಲೆ ಕುಳಿತು ಬೇಟೆಯಾಡುವುದು.

**೨. ಸಜಾಲ** – ಬಲೆಯ ಮೂಲಕ ಬೇಟೆಯಾಡುವುದು.

**೩. ಕಲ್ಯಾ** – ತಂತ್ರಗಳನ್ನು ಉಪಯೋಗಿಸಿ ಬೇಟೆಯಾಡುವುದು.

**೪. ಯಾವಶೀ** – ಪ್ರಾಣಿಯ ಚಹರೆಗಯನ್ನು ಅನುಸರಿಸಿ ಬೇಟೆಯಾಡುವುದು ಅಥವಾ ಪ್ರಾಣಿಗಳ ಇರುವಿಕೆಯನ್ನು ಅದರ ಕುರುಹುಗಳನ್ನೂ ಅರಿತು ಬೇಟೆಯಾಡುವುದು.

**೫. ಸಾಪೇಕ್ಷ** – ಪ್ರಾಣಿಯನ್ನು ಗುರಿ ನೋಡಿ ಆ ಗುರಿಗೆ ಅಸ್ತ್ರಗಳನ್ನು ಒಗೆದು ಬೀಸಿ ಕೊಲ್ಲುವುದು.

**೬. ಪಾದಪೇಕ್ಷ** – ಪ್ರಾಣಿಯ ಕಾಲಿನ ಗುರುತುಗಳನ್ನು ಹಿಡಿದು ಬೇಟೆಯಾಡುವ ವಿಧಾನ.

**೭. ಶ್ವಗಣಿಕಾ** – ನಾಯಿಗಳನ್ನೂ ಪ್ರಾಣಿಗಳ ಮೇಲೆ ಬಿಟ್ಟು, ಆ ಮೂಲಕ ಅವುಗಳನ್ನು ನಿಲ್ಲಿಸಿ ಶಸ್ತ್ರಪ್ರಯೋಗ ಮಾಡಿ ಬೇಟೆಯಾಡುವುದು.

ಹೀಗೆ ಕರ್ನಾಟಕದಲ್ಲಿ ಬೇಟೆಯ ಸ್ಮಾರಕಗಳನ್ನು ಗಮನಿಸಿದಾಗ ಹುಲಿಬೇಟೆ, ಆನೆ, ಹಂದಿ, ಜಿಂಕೆ, ಗೂಳಿ ಮುಂತಾದ ಪ್ರಾಣಿಗಳೊಡನೆ ಹೋರಾಡಿದ ಮಾಹಿತಿಗಳು ಸಾಕಷ್ಟು ದೊರೆಯುತ್ತದೆ. ಅದೇ ಬೇಟೆಗೆ ಸಂಬಂಧಿಸಿದ ಶಾಸನಗಳು ಕಡಿಮೆ ಎನ್ನಬಹುದು. ಆದರೆ ಶಾಸನ ರಹಿತ ಸ್ಮಾರಕಶಿಲ್ಪಗಳಿಗೆ ಕಡಿಮೆ ಇಲ್ಲ ಎಂದೆನ್ನಬಹುದು.

**ಹಂದಿಬೇಟೆ**

ಹಂದಿಬೇಟೆ ಕರ್ನಾಟಕದ ಅರಸರಿಗೆ ಬಹುಪ್ರಿಯವಾಗಿದ್ದಂತೆ, ಜನ ಸಾಮಾನ್ಯರಿಗೂ ಪ್ರಿಯವಾಗಿದ್ದಿತು. ಏಕೆಂದರೆ ಪ್ರಾಚೀನತೆಯಿಂದ ಪ್ರಸ್ತುತವಾಗಿ ಕಾಡು ಹಂದಿಬೇಟೆ ನಡೆಯುತ್ತಿದೆ. ಹಂದಿಬೇಟೆಯ ಶಾಸನಗಳನ್ನು ಗಮನಿಸಿದರೆ ವೀರರು ಪಾದಪೇಕ್ಷ ಮತ್ತು ಶ್ವಗಣಿಕಾ ವಿಧಾನವನ್ನು ಅನುಸರಿಸುತ್ತಿದ್ದರು ಎಂದು ತಿಳಿದುಬರುತ್ತದೆ. ಪಾದಪೇಕ್ಷ ವಿಧಾನದಲ್ಲಿ ಬೇಟೆಯಾಡುವುದು ಬೇಟೆಗಾರನಿಗೆ ಹಲವಾರು ರೀತಿಯ ಕ್ಷೇಮ. ಏಕೆಂದರೆ ಈ ವಿಧಾನದಲ್ಲಿ ಹಂದಿ ಮಡಿಯದೇ ಹೋದರೆ ಬೇಟೆಗಾರ ನೇರವಾಗಿ ಹೋಗಿ ಹಂದಿಯನ್ನು ಇರಿಯುವ ಪ್ರಯತ್ನ ಮಾಡುತ್ತಿದ್ದ. ಹಂದಿಯ ಬೇಟೆಯಲ್ಲಿ ಮಡಿದ ವೀರರೆಲ್ಲರೂ ಬಹುಶಃ ಇದೇ ವಿಧಾನವನ್ನು ಬಳಸುತ್ತಿದ್ದಿದ್ದರು ಎನ್ನಬಹುದು. ಹಂದಿಬೇಟೆಯಲ್ಲಿ ಶ್ವಾನವು ಅತ್ಯಂತ ಪ್ರಮುಖವಾಗಿತ್ತು ಎಲ್ಲಾ ಹಂದಿ ಬೇಟೆಯ ವೀರಗಲ್ಲುಗಳಲ್ಲಿಯೂ ನಾಯಿಯು ಕಂಡುಬರುತ್ತದೆ.

ಒಂದು ವೇಳೆ ನಾಯಿಯು ಇಲ್ಲದಿದ್ದರೆ ವೀರನೇ ನೇರವಾಗಿ ಹೋರಾಟ ಮಾಡಿರುವ ವಿಷಯವನ್ನು ಗಮನಿಬೇಕು.

**ಊರು : ಕಾಟಿಗಲ್ಲು (ಮಸ್ಕಿ)** **ಸ್ಥಳ : ಸೋಮನಾಥ ದೇವಾಲಯದ ಆವರಣ**

**ಶಿಲ್ಪ : ಹಂದಿಬೇಟೆ ವೀರಗಲ್ಲು** **ಅಭಿಮುಖ : ಪೂರ್ವಾಭಿಮುಖ**

**ಕಾಲ : ೧೧-೧೨ನೇ ಶತಮಾನ** **ಸ್ಥಿತಿ : ಮಧ್ಯಮ**

**ವಿವರಣೆ :** ಈ ವೀರಗಲ್ಲು ಒಂದು ಹಂತವನ್ನು ಒಳಗೊಂಡಿದೆ.

ಇದು ಕಪ್ಪು ಕಣಶಿಲೆಯಲ್ಲಿ ಕೆತ್ತಲಾಗಿದೆ. ಈ ವೀರಗಲ್ಲಿನಲ್ಲಿ ವೀರನು ಕುದುರೆ ಮೇಲೆ ಕುಳಿತಿದ್ದು, ಕುದುರೆಯು ಸರ್ವಾಲಂಕೃತವಾಗಿ ಅದರ ಬಹುಭಾಗವು ತೃಟಿತವಾಗಿದ್ದು, ಕುದುರೆಯ ರುಂಡಭಾಗವು ತೃಟಿತಗೊಂಡಿದೆ. ಕುದುರೆಯ ಮುಂಭಾಗದಲ್ಲಿ ನಾಯಿಯೊಂದು ತನ್ನ ಮುಂಗಾಲಿನಿ ಎರಡು ಕಾಲುಗಳಿಂದ ಹಂದಿಯ ಕುತ್ತಿಗೆಗೆ ಕಾಲು ಇಟ್ಟು ಬಾಯಿಯಿಂದ ಕಚ್ಚುತ್ತಿರುವಂತೆ ಕೆತ್ತಲಾಗಿದೆ. ನಾಯಿಯ ದಾಳಿಯಿಂದ ಹಂದಿಯು ತಪ್ಪಿಸಿಕೊಳ್ಳಲು ತನ್ನ ಮುಖವನ್ನು ಬಲಕ್ಕೆ ವಾಲಿಸಿದೆ. ಅಂದರೆ ನಾಯಿಯು ಹಂದಿನ್ನು ಹೆದರಿಸುವಷ್ಟು ಶಕ್ತಿಶಾಲಿಯಾಗಿತ್ತು ಎಂದು ತಿಳಿದುಬರುತ್ತದೆ. ಇದೇ ವೀರಗಲ್ಲಿನಲ್ಲಿ ಇಂತಹದೇ ಮತ್ತೊಂದು ದೃಶ್ಯವನ್ನು ಕುದುರೆಯ ಕಾಲುಗಳ ಮಧ್ಯಭಾಗದಲ್ಲಿ ಚಿತ್ರಿಸಲಾಗಿದೆ. ಅದರಲ್ಲಿ ಹಂದಿಯು ಎಡಭಾಗದಲ್ಲಿ ನಾಯಿಯು ಬಲಭಾಗದ್ದು ಇಲ್ಲಿಯೂ ಸಹ ನಾಯಿ ಹಂದಿಯ ಮುಖಕ್ಕೆ ಕಚ್ಚುತ್ತಿರುವಂತೆ ಕೆತ್ತಲಾಗಿದ್ದು ಹಂದಿಯು ದಾಳಿಯಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದೆ.

**ಊರು : ಕಾಟಿಗಲ್ಲು (ಮಸ್ಕಿ)** **ಸ್ಥಳ : ಸೋಮನಾಥ ದೇವಾಲಯದ ಆವರಣ**

**ಶಿಲ್ಪ : ಹಂದಿಬೇಟೆ ವೀರಗಲ್ಲು** **ಅಭಿಮುಖ : ಪೂರ್ವಾಭಿಮುಖ**

**ಕಾಲ : ೧೧-೧೨ನೇ ಶತಮಾನ** **ಸ್ಥಿತಿ : ಮಧ್ಯಮ**

**ವಿವರಣೆ :** ಈ ವೀರಗಲ್ಲು ಒಂದು ಹಂತವನ್ನು ಒಳಗೊಂಡಿದೆ.

ಇಲ್ಲಿ ವೀರನ ಮುಂಡಭಾಗವು ತೃಟಿತಗೊಂಡಿದೆ. ವೀರನು ಅಶ್ವರೂಢನಾಗಿದ್ದು, ಕುದರೆಯು ಸರ್ವಾವಾಲಂಕೃತವಾಗಿದೆ. ಇದು ಓಡುತ್ತಿರುವಂತೆ ಕೆತ್ತಲಾಗಿದೆ. ಇದರ ಎರಡು ಕಾಲುಗಳ ಮಧ್ಯಭಾಗದಲ್ಲಿ ನಾಯಿಯೊಂದು ಹಂದಿಯನ್ನು ಹಿಡಿಯುತ್ತಿರುವಂತೆ ಚಿತ್ರಿಸಿದ್ದು ಅದರ ಸನ್ನಿವೇಶ ಅಸ್ಪಷ್ಟವಾಗಿದೆ.

**ಊರು : ದಿದ್ದಿಗಿ (ಮಸ್ಕಿ)** **ಸ್ಥಳ : ಸೋಮನಾಥ ದೇವಾಲಯದ ಗರ್ಭಗುಡಿಯಲ್ಲಿ**

**ಶಿಲ್ಪ : ಬೇಟೆ ವೀರಗಲ್ಲು** **ಅಭಿಮುಖ : ಪೂರ್ವಾಭಿಮುಖ**

**ಕಾಲ : ೧೧-೧೨ನೇ ಶತಮಾನ** **ಸ್ಥಿತಿ : ಮಧ್ಯಮ**

**ವಿವರಣೆ :** ಈ ವೀರಗಲ್ಲು ಎರಡು ಹಂತವನ್ನು ಒಳಗೊಂಡಿದೆ.

ಮೊದಲನೆಯ ಹಂತದಲ್ಲಿ ವೀರರನ್ನು ಮತ್ತು ಅವನ ಹಿಂದೆ ಸತಿಯ ನಿಂತಿದ್ದಾಳೆ. ಇವಳ ಹಿಂಭಾಗದಲ್ಲಿ ರಾಜಛತ್ರಿಯನ್ನು ಹಿಡಿದು ಸೈನಿಕರು ನಿಂತಿರುವುದರಿಂದ ಅವರು ರಾಜ ಮನೆತನದವರಲ್ಲಿ ಪ್ರಮುಖರು ಎಂದು ತಿಳಿಯಬಹುದು. ಸತಿಯು ಬಲಗೈಯಲ್ಲಿ ತಂಬಿಗೆಯನ್ನು ಎಡಗೈಯಲ್ಲಿ ನಿಂಬೆಹಣ್ಣು ಹಿಡಿದು ನಿಂತಿದ್ದಾಳೆ. ವೀರನು ಬಲಗೈಯಲ್ಲಿ ಭರ್ಚಿಯನ್ನು ಹಿಡಿದು ಮೇಲಕ್ಕೆ ಎತ್ತಿದ್ದು, ಎಡಗೈಯಲ್ಲಿ ಸೊಂಟದಲ್ಲಿರುವ ಬಾಕುವನ್ನು ತೆಗೆಯುತ್ತಿದ್ದಂತೆ ತೋರಿಸಲಾಗಿದೆ. ಇವನ ಕಾಲುಗಳ ಮಧ್ಯಭಾಗದಲ್ಲಿ ಎರಡು ನಾಯಿಗಳನ್ನು ಚಿತ್ರಿಸಲಾಗಿದೆ. ವೀರನ ಮೇಲ್ಭಾಗದಲ್ಲಿ ವೀರನೊಬ್ಬನು ಭರ್ಚಿಯಿಂದ ಹಂದಿಯನ್ನು ಇರಿಯುತ್ತಿರುವಂತೆ, ಹಂದಿಯ ಕಾಲುಗಳನ್ನು ನಾಯಿಯು ಹಿಡಿಯುತ್ತಿರುವಂತೆ ಕೆತ್ತಲಾಗಿದೆ. ಇದರ ಮೇಲ್ಭಾಗದಲ್ಲಿ ವೀರನೋರ್ವನು ಹುಲಿಯೊಡನೆ ಹೋರಾಡುತ್ತಿರುವ ದೃಶ್ಯವನ್ನು ಪ್ರಸ್ತುತ ಪಡಿಸಲಾಗಿದೆ.

ಎರಡನೆಯ ಹಂತದಲ್ಲಿ ವೀರನು ಅಶ್ವರೂಢನಾಗಿದ್ದು, ಅದು ಸರ್ವಾಲಕೃತಗೊಂಡಿದೆ. ವೀರನ ರುಂಡಭಾಗದಿಂದ ವೀರಗಲ್ಲು ತುಂಡಾಗಿದೆ. ವೀರನ ಹಿಂಭಾಗದಲ್ಲಿ ಮೂರು ಜನರು ಸೈನಿಕರು ನಿಂತಿದ್ದಾರೆ. ವೀರನು ವೀರಮುಡಿ, ವಿಶಿಷ್ಟವಾದ ಉದ್ದನೆಯ ಕಿವಿಯೊಲೆ, ಹಾರ, ಕಡಗ, ಸೊಂಟಪಟ್ಟಿ ಮತ್ತು ಹಣೆಯಲ್ಲಿ ವಿಭೂತಿ ಧರಿಸಿದ್ದಾನೆ. ಇದರ ಮೇಲ್ಭಾಗದಲ್ಲಿ ವೀರನೋರ್ವನು ಬಾಣದಿಂದ ಜಿಂಕೆಯ ಕುತ್ತಿಗೆಗೆ ಬಾಣವನ್ನು ಬಿಟ್ಟಿದ್ದು ಅದು ಎದ್ದುಕಾಣುತ್ತದೆ. ಇದರ ಕೆಳಭಾಗದಲ್ಲಿ ನಾಲ್ಕು-ಐದು ನಾಯಿಗಳು ಹಂದಿಯನ್ನು ಬೇಟೆಯಾಡುತ್ತಿವೆ. ಇದರ ಕೆಳಭಾಗದಲ್ಲಿ ವೀರನಿಗೆ ಸೇವಕನು ಚಾಮರವನ್ನು ಹಿಡಿದು ನಿಂತಿದ್ದಾನೆ. ಇವನ ಕೆಳಭಾಗದಲ್ಲಿ ಮತ್ತೊಂದು ನಾಯಿಯು ಬೇಟೆಯನ್ನು ಆಡುತ್ತಿದೆ. ವೀರಗಲ್ಲುವಿನ ಮೇಲೆ ಪ್ರಭಾವಳಿಯನ್ನು ಬಳ್ಳಿಗಳಿಂದ ಅಂಲಕೃತಗೊಳಿಸಿ ಈ ಬೇಟೆಯ ವೀರಗಲ್ಲನ್ನು ಚಿತ್ರಿಸಲಾಗಿದೆ.

**ಊರು : ಗಬ್ಬೂರು(ದೇವದುರ್ಗ) ಸ್ಥಳ : ಶಂಕರಲಿಂಗ ದೇವಾಲಯದ ಮುಂದೆ**


**ಶಿಲ್ಪ : ಹಂದಿಬೇಟೆ ವೀರಗಲ್ಲು ಅಭಿಮುಖ : ಪೂರ್ವಾಭಿಮುಖ**

**ಕಾಲ : ೧೧-೧೨ನೇ ಶತಮಾನ ಸ್ಥಿತಿ : ಉತ್ತಮ**

**ವಿವರಣೆ :** ಈ ವೀರಗಲ್ಲು ಮೂರು ಹಂತವನ್ನು ಒಳಗೊಂಡಿದೆ.

ತಾಲ್ಲೂಕು ಕೇಂದ್ರದಿಂದ ಗಬ್ಬೂರು ಗ್ರಾಮವು ೧೮ ಕಿ.ಮೀ. ಅಂತರದಲ್ಲಿದೆ. ಊರಿನ ಮಧ್ಯಭಾಗದಲ್ಲಿರು ಶಂಕರಲಿಂಗ ದೇವಸ್ಥಾನದ ಮುಂಭಾಗದಲ್ಲಿ ಹಂದಿಬೇಟೆ ವೀರನಶಿಲ್ಪವು ಕಂಡುಬರುತ್ತದೆ. ಈ ಸ್ಮಾರಕವನ್ನು ಕಪ್ಪು ಕಣಶಿಲೆಯಲ್ಲಿ ಮೂರು ಹಂತಗಳಲ್ಲಿ ಕಂಡರಿಸಲಾಗಿದೆ. ಮೊದಲ ಹಂತದ ದೃಶ್ಯದಲ್ಲಿ ವೀರನನ್ನು ಪ್ರಧಾನವಾಗಿ ಚಿತ್ರಿಸಿದ್ದು, ವೀರನು ಹಂದಿಯೊಂದಿಗೆ ಕಾದಾಡುತ್ತಿರುವಂತೆ ಕೆತ್ತಲಾಗಿದೆ. ವೀರನು ಎರಡು ಕೈಯಲ್ಲಿ ದಪ್ಪದಾದ ಮತ್ತು ಉದ್ದನೆಯ ಭರ್ಚಿಯನ್ನು ಹಿಡಿದುಕೊಂಡು ಹಂದಿಯ ಹೆದೆಗೆ

ಇರಿಯುತ್ತಿದ್ದಾನೆ. ಹಂದಿಯು ತನ್ನ ಎರಡು ಮುಂಗಾಲುಗಳನ್ನು ಮೇಲೆತ್ತಿ ರೋಷದಿಂದ ಬಾಯಿಯನ್ನು ತೆಗೆದು ಪ್ರತಿದಾಳಿಯನ್ನು ಮಾಡುತ್ತಿದೆ. ಎರಡನೆಯ ಹಂತದಲ್ಲಿ ಮಡಿದ ವೀರನನ್ನು ಸ್ವರ್ಗಸುಂದರಿಯರು ವೀರನನ್ನು ಹಿಡಿದುಕೊಂಡು ಹೋಗುತ್ತಿರುವ ಹಾಗೆ ಮತ್ತು ಅವರು ಚಾಮರವನ್ನು ಹಿಡಿದುಕೊಂಡು ಹೋಗುತ್ತಿದ್ದಾರೆ. ಇನ್ನು ಮೂರನೆಯ ಹಂತದಲ್ಲಿ ಶಿವಲಿಂಗವನ್ನು ಚಿತ್ರಿಸಲಾಗಿದೆ.



ಈ ಹಂದಿಬೇಟೆಯ ವೀರಗಲ್ಲನ್ನು ಗಮನಿಸಿದರೆ ಇದು ಪಾದಪೇಕ್ಷ ಮಾರ್ಗದಲ್ಲಿ ಬೇಟೆಯಾಡಿರಬಹುದು ಇದರಲ್ಲಿ ಪ್ರಾಣಿಯ ಹೆಜ್ಜೆಯ ಗುರುತುಗಳನ್ನು ಅನುಸರಿಸಿ ಹೋಗಿ ಪ್ರಾಣಿ ಎಲ್ಲಿದೆ ಎಂಬುದನ್ನು ಅರಿತು ಬೇಟೆಯಾಡಿರುವ ಸಾಧ್ಯತೆ ಇದೆ. ಏಕೆಂದರೆ ಈ ಒಂದು ವೀರಗಲ್ಲಿನಲ್ಲಿ ನಾಯಿಯು ಸಹಾಯ ಮಾಡದೆ ಇರಬಹುದು, ಅದಕ್ಕಾಗಿ ಇಲ್ಲಿ ನಾಯಿಯ ಶಿಲ್ಪವು ಕಂಡುಬರುವುದಿಲ್ಲ.

**ಹುಲಿಬೇಟೆ ವೀರಗಲ್ಲುಗಳು**

ಪ್ರಾಚೀನ ಕಾಲದಲ್ಲಿ ಕಾಡು ಪ್ರಾಣಿಗಳ ಬೇಟೆ ಮೋಜಿಗಾಗಿ ಮತ್ತು ಮನರಂಜನೆಗಾಗಿ ಏರ್ಪಡಿಸುವ ಒಂದು ದುಬಾರಿ ಕ್ರೀಡೆಯಾಗಿತ್ತು. ರಾಜರು ತಮ್ಮ ಆಯುದ್ಧ ಮತ್ತು ಸೇವಕರ ಜೊತೆ ಕಾಡು ಹೊಕ್ಕು ಪ್ರಾಣಿಗಳನ್ನು ಅಟ್ಟಾಡಿಸಿ ಬೇಟೆಯಾಡುತ್ತಿದ್ದರು. ಹುಲಿಯಂತಹ ಅಪಾಯಕಾರಿ ಪ್ರಾಣಿಗಳನ್ನು ಬೇಟೆಯಾಡುವಾಗ ಆಕಸ್ಮಾತ್ ಅಜಾಗರೂಕತೆ ಮತ್ತು ದುರದೃಷ್ಟವಾಗಿ ಸೇವಕರು ಅವುಗಳ ದಾಳಿಗೆ ಬಲಿಯಾಗುತ್ತಿದ್ದರು. ಅಂತಹವರ ನೆನಪಿಗೆ ರಾಜರು ಸ್ಮಾರಕಶಿಲ್ಪಗಳನ್ನು ನೆಡುತ್ತಿದ್ದರು. ಇದರಲ್ಲೆ ಕೆಲವು ಎಂಟೆದೆ ವೀರರು ಸಹ ಧೈರ್ಯವಾಗಿ ಕಾಡಿಗೆ ನುಗ್ಗಿ ಹುಲಿಯಂತಹ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದರು. ಅವುಗಳ ಜೊತೆ ವೀರಾವೇಶದಿಂದ ಹೋರಾಡಿ ಅವುಗಳನ್ನು ಕೊಂದು ತಾವೂ ಸಹ ಮರಣಹೊಂದುತ್ತಿದ್ದರು.

ಬೇರೆ ಯಾವುದೋ ಪ್ರಾಣಿಯನ್ನು ಗುರಿಯಾಗಿಸಿ ಹೋದಾಗ ಹುಲಿಗಳು ಎದುರಾಗಿ ವೀರರು ಮರಣಿಸಿದ ಸಂದರ್ಭದಲ್ಲಿ ಕೂಡ ಅವರ ನೆನಪಿಗಾಗಿ ಅವರ ಕುಟುಂಬದವರು ಇಲ್ಲವೆ ಸಂಬಂಧಿಕರು ಸ್ಮಾರಕಗಳನ್ನು ಹಾಕಿಸುವ ರೂಢಿಯಲ್ಲಿತ್ತು. ಕಾಡಿನ ಪಕ್ಕದ ಜನವಸತಿ ಪ್ರದೇಶಕ್ಕೆ ಹುಲಿಗಳು ಆಕ್ರಮಣ ಮಾಡಿದಾಗ ಅವುಗಳನ್ನು ಎದುರಿಸಿ ಹೋರಾಟ ಮಾಡಿ ಹುಲಿಯನ್ನು ಕೊಂದು ತಾವೂ ಸಹ ಸಾಯುತ್ತಿದ್ದಂತಹ ವೀರರಿಗೆ ಹಾಕಿಸಿದ ಹುಲಿಬೇಟೆ ವೀರಗಲ್ಲುಗಳು ನೂರಾರು ಸಂಖ್ಯೆಯಲ್ಲಿವೆ. ಅಲ್ಲದೆ

ವೀರರ ಜೊತೆ ಅವರು ನೆಚ್ಚಿನ ಬೇಟೆ ನಾಯಿಗಳು ಸಹ ಸತ್ತಂತಹ ಅನೇಕ ಉದಾಹರಣೆಗಳು ದೊರೆಯುತ್ತವೆ. ಇದಕ್ಕೆ ಹುಲಿಬೇಟೆ ವೀರಗಲ್ಲುಗಳಲ್ಲಿ ಹುಲಿಯ ಮೇಲೆ ದಾಳಿ ಮಾಡುತ್ತಿರುವ ನಾಯಿಗಳ ಶಿಲ್ಪಗಳು ಸಾಕ್ಷಿಯಾಗಿವೆ.

ರಾಯಚೂರು ಭಾಗದಲ್ಲಿ ನಮಗೆ ಚಿಕಲಪರ್ವಿ ಮತ್ತು ಬೆಟ್ಟದೂರು ಗ್ರಾಮಗಳಲ್ಲಿ ಹುಲಿಬೇಟೆ ವೀರಗಲ್ಲುಗಳು ಕಂಡುಬರುತ್ತವೆ.

**ಊರು : ಬೆಟ್ಟದೂರು(ಮಾನ್ವಿ)** **ಸ್ಥಳ : ಪ್ರಾಥಮಿಕ ಶಾಲೆಯ ಮುಂಭಾಗದಲ್ಲಿ**

**ಶಿಲ್ಪ : ಹುಲಿಬೇಟೆ ವೀರಗಲ್ಲು** **ಅಭಿಮುಖ : ಉತ್ತರಾಭಿಮುಖ**

**ಕಾಲ : ೧೬–೧೭ನೇ ಶತಮಾನ** **ಸ್ಥಿತಿ : ಉತ್ತಮ**

**ವಿವರಣೆ :** ಈ ವೀರಗಲ್ಲು ಒಂದು ಹಂತವನ್ನು ಒಳಗೊಂಡಿದೆ.

ಇಲ್ಲಿ ಹುಲಿಯೊಂದನ್ನು ಮಾತ್ರ ಕೆತ್ತಲಾಗಿದೆ. ಹುಲಿಯು ತನ್ನ ಮುಂದಿನ ಒಂದು ಕಾಲನ್ನು ಮೇಲೆತ್ತಿ ನಿಂತಿದೆ. ಬಾಲವು ಕೂಡ ಹಿಂದೆ ಸುರಳಿಯಾಕಾರದಲ್ಲಿದ್ದು. ರೋಷದಿಂದ ಬಾಯಿಯನ್ನು ತೆಗೆದು ನಿಂತಿದೆ. ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳನ್ನು ಚಿತ್ರಿಸಿದ್ದಾರೆ.

**ಊರು : ಚಿಕಲಪರ್ವಿ(ಮಾನ್ವಿ)** **ಸ್ಥಳ : ಹನಮಗೌಡ ಗೌಡರ ಅವರ ಮನೆಯ ಮುಂಭಾಗದಲ್ಲಿ**

**ಶಿಲ್ಪ : ಹುಲಿಬೇಟೆ ವೀರಗಲ್ಲುಗಳು** **ಅಭಿಮುಖ : ಪೂರ್ವಾಭಿಮುಖ**

**ಕಾಲ : ೧೬–೧೭ನೇ ಶತಮಾನ** **ಸ್ಥಿತಿ : ಉತ್ತಮ**

**ವಿವರಣೆ :** ಈ ವೀರಗಲ್ಲು ಒಂದು ಹಂತವನ್ನು ಒಳಗೊಂಡಿದೆ.



ಚಿಕಲಪರ್ವಿ ಗ್ರಾಮದ ಹನಮಗೌಡರ ಗೌಡರ ಅವರ ಮನೆಯ ಮುಂದಿನ ಕಟ್ಟೆಯ ಮೇಲೆ ಮೂರು ವೀರಗಲ್ಲುಗಳಿದ್ದು ಅವುಗಳಲ್ಲ ಪೈಕಿ ಎರಡು ವೀರಗಲ್ಲುಗಳು ಹುಲಿಬೇಟೆ ವೀರಗಲ್ಲುಗಳು ಎಂದು ಗುರುತಿಸಬಹುದು. ಎಡದಿಂದ ಮೊದಲೆಯ ವೀರಗಲ್ಲು ವೀರನು ಅಲಂಕೃತವಾಗಿದ್ದು ಎರಡು ಕೈಯಿಂದ ಭರ್ಚಿಯನ್ನು ಹಿಡಿದು ಹುಲಿಯ ಬಾಯಿಗೆ ಇರಿಯುತ್ತಿದ್ದಾನೆ. ಹುಲಿಯು ವೀರನ ಮೇಲೆ ಎರಗಿ ಬಂದಿರುವ ಹಾಗೆಯೇ ತನ್ನ ಕಾಲುಗಳನ್ನು ಮೇಲೆತ್ತಿ ಬಾಯಿಯನ್ನು ತೆಗೆದಿದೆ. ಅಂದರೆ ವೀರನು ಹುಲಿಯಿಂದ ರಕ್ಷಿಸಿಕೊಳ್ಳಲು ಶೌರ್ಯದಿಂದ ಹುಲಿಗೆ ಭರ್ಚಿಯಿಂದ ಹಿರಿಯುತ್ತಿದ್ದಾನೆ. ಇದರ

ಪರಿಣಾಮವಾಗಿ ಈ ಹೋರಾಟದಲ್ಲಿ ವೀರನು ಮರಣವನ್ನು ಹೊಂದಿರುವ ಸಾಧ್ಯತೆ ಇದೆ. ಇದರ ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳಿವೆ. ಹುಲಿಯ ಹಿಂಭಾಗದಲ್ಲಿ ಮತ್ತೊಂದು ಅಸ್ಪಷ್ಟ ಪ್ರಾಣಿಯ ಚಿತ್ರವಿದೆ.

ಮೂರನೆಯ ವೀರಗಲ್ಲು ವೀರನು ಸುಂದರ ಕೇಶವಿನ್ಯಾಸ ಮತ್ತು ವಸ್ತ್ರವಿನ್ಯಾಸವನ್ನು ತೋಳ್ಬಂಧಿ, ಕಾಲ್ಗಡ, ಕೈಗಡಗಗಳನ್ನು ಧರಿಸಿದ್ದಾನೆ. ಈ ವೀರನ ಮುಂದೆ ಸತಿಯು ನಿಂತಿದ್ದಾಳೆ. ಬಲಗೈಯಲ್ಲಿ ನೀರಿನ ಚೀಲ ಮತ್ತು ಎಡಗೈಯಲ್ಲಿ ನಿಂಬೆಹಣ್ಣು ಹಿಡಿದು ನಿಂತಿದ್ದಾಳೆ. ಇವಳ ಹಿಂಭಾಗದಲ್ಲಿ ಒಂದು ಹಸು ಇದೆ. ವೀರನು ಖಡ್ಗ ಮತ್ತು ಗುರಾಣಿಯನ್ನು ಹಿಡಿದುಕೊಂಡು ಹೋರಾಡುವ ಮುನ್ಸೂಚನೆಯನ್ನು ಕೊಟ್ಟಿದ್ದಾನೆ. ಇಲ್ಲಿ ಅವನ ಮುಂದೆ ಹುಲಿಯ ಚಿತ್ರನ್ನು ಕೂಡ ತೋರಿಸಲಾಗಿ, ಇದರಿಂದ ವೀರನು ಹುಲಿಯೊಂದಿಗೆ ಹೋರಾಟ ಮಾಡಿ ಮರಣಹೊಂದಿರಬಹುದು. ವೀರನ ಹಿಂಭಾಗದಲ್ಲಿ ಒಂದು ನವಿಲು ಮತ್ತು ನಾಯಿಯ ಚಿತ್ರವನ್ನು ತೋರಿಸಲಾಗಿದೆ. ಈ ವೀರಗಲ್ಲುವಿನ ಮೇಲ್ಭಾದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳಿವೆ.

**ಜಿಂಕೆ(ಕಡವೆ)ಬೇಟೆ ವೀರಗಲ್ಲುಗಳು**

ಜಿಂಕೆಯನ್ನು ಬೇಟೆಯಾಡಲು ಹೋಗಿ ಮಡಿದವರೂ ಇದ್ದಾರೆಂದರೆ ಆಶ್ಚರ್ಯವಾಗಬಹುದು. ಶಾಸನಗಳು ಕಡಿಮೆ ಆದರೆ ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ. ಅವುಗಳಲ್ಲಿ ರಾಯಚೂರು ಜಿಲ್ಲೆಯಲ್ಲಿ ಆರು ಕಂಡುಬರುತ್ತವೆ. ಇಂತಹ ವೀರಗಲ್ಲುಗಳನ್ನು ಈ ರೀತಿಯಾಗಿ ಅರ್ಥೈಸಬಹುದು. ವೀರನು ಕಡವೆ ಬೇಟೆಗೆ ಹೋಗಿದ್ದು ಅಲ್ಲಿ ಇತರ ಬೇಟೆಕಾರರ ದಾಳಿಗೆ ಸಿಕ್ಕಿ ಮಡಿದಿರಬಹುದು. ಅಥವಾ ಜಿಂಕೆ(ಕಡವೆ) ಬೇಟೆಯ ಸಮಯದಲ್ಲಿ ಸತ್ತ ಕಡವೆಯ ಸಲುವಾಗಿ ಉಭಯಪಕ್ಷದಲ್ಲಿ ಕಲಹವಾಗಿ ವೀರನು ಹತನಾಗಿರಬಹುದು.


**ಊರು : ಆಯನೂರ(ಸಿಂಧನೂರು)** **ಸ್ಥಳ : ಚೌಡೇಶ್ವರಿ ದೇವಾಲಯದ ಹಿಂಭಾಗದಲ್ಲಿ**

**ಶಿಲ್ಪ : ಜಿಂಕೆಬೇಟೆ ವೀರಗಲ್ಲುಗಳು** **ಅಭಿಮುಖ : ದಕ್ಷಿಣಾಭಿಮುಖ**

**ಕಾಲ : ೧೬–೧೭ನೇ ಶತಮಾನ** **ಸ್ಥಿತಿ : ಉತ್ತಮ**

**ವಿವರಣೆ :** ಈ ವೀರಗಲ್ಲು ಒಂದು ಹಂತವನ್ನು ಒಳಗೊಂಡಿದೆ.





ಆಯನೂರು ಗ್ರಾಮವು ತಾಲೂಕು ಕೇಂದ್ರದಿಂದ ೩೫ ಕಿ.ಮೀ ದೂರದಲ್ಲಿದೆ. ಇಲ್ಲಿ ಒಟ್ಟು ೫ ವೀರಗಲ್ಲುಗಳಿದ್ದು, ಅವುಗಳಲ್ಲಿ ಒಂದು ಸಾಮಾನ್ಯ ವೀರಗಲ್ಲು, ಎರಡು ಜಿಂಕೆಬೇಟೆ ಮತ್ತು ಎರಡು ವೀರಮಾಸ್ತಿಗಲ್ಲುಗಳಿವೆ. ಮೊದಲನೆಯದು ಜಿಂಕೆ ಬೇಟೆ ವೀರಗಲ್ಲು ಇಲ್ಲಿ ವೀರನು ತಲೆಗೆ ತುರುಬು ಕಟ್ಟಿದ್ದು ಅದಕ್ಕೆ ವಿಶೇಷವಾದ ಪೇಟವನ್ನು ಧರಿಸಿದ್ದಾನೆ. ಮುಖದಲ್ಲಿ ಉರಿ ಮಿಸೆಬಿಟ್ಟಿದ್ದು, ಕೈಗಡಗ. ತೋಳ್ಬಂದಿ, ಕಾಲ್ಗಡಗ ಮತ್ತು ಕೊರಳಲ್ಲಿ ವಿಶೇಷವಾದ ಪದಕದ ಆಭರಣವನ್ನು ಅಲಂಕರಿಸಿದ್ದಾನೆ. ಸೊಂಟದಲ್ಲಿ ವೀರಪಂಚೆಯಿದ್ದು ಅದು ಎಡ, ಬಲ ಮತ್ತು ಕಾಲಿನ ಮಧ್ಯಭಾಗದಲ್ಲಿ ಇಳಿಬಿದ್ದಿದೆ. ಹಾಗೂ ಸೊಂಟದಲ್ಲಿ ಬಾಕುವನ್ನು ಇರಿಸಿ, ಬಲಗೈಯನ್ನು ಮೇಲೆತ್ತಿ ಖಡ್ಗವನ್ನು ಹಿಡಿದು, ಎಡಗೈಯಲ್ಲಿ ಬಂದೂಕುನ್ನು ಹಿಡಿದು ನಿಂತಿದ್ದಾನೆ. ಇವನ ಹಿಂಭಾಗದಲ್ಲಿ ನಾಯಿಯೊಂದು ಜಿಂಕೆಯ ಬೆನ್ನಿಗೆ ಬಾಯಿಯನ್ನು ಇಟ್ಟು ಬೇಟೆಯಾಡುತ್ತಿದ್ದು, ಜಿಂಕೆಯು ತಿರುಗಿ ತನ್ನ ದೇಹವನ್ನು ನೋಡಿಕೊಳ್ಳುತ್ತಿರುವ ಹಾಗೆ ಚಿತ್ರಿಸಲಾಗಿದೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರರ ಕೆತ್ತನೆಗಳಿವೆ. ಅಂದರೆ ಇದನ್ನು ಬೇಟೆಯಾಡುವ ಉದ್ದೇಶ ಆಹಾರವನ್ನು ಸಂಗ್ರಹಿಸುವುದು ಇರಬೇಕು.

ಇನ್ನೊಂದು ವೀರಗಲ್ಲು ಮೇಲೆ ಹೇಳಿದ ವೀರನ ಬಹುತೇಕ ಎಲ್ಲಾ ಲಕ್ಷಣಗಳನ್ನು ಹೊಂದಿದ್ದಾನೆ. ಇದರ ಜೊತೆಗೆ ವೀರನು ಬಲಗೈಯಲ್ಲಿ ಖಡ್ಗವನ್ನು ಎಡಗೈಯಲ್ಲಿ ಧ್ವಜವನ್ನು ಇಡಿದುಕೊಂಡಿದ್ದಾನೆ. ಶಿರಮುಡಿ ಬಟ್ಟೆಯಿಂದ ಕಟ್ಟಿದ್ದು ಅದು ಬಲಕ್ಕೆ ವಾಲಿದೆ. ತಲೆಗೆ ಇನ್ನೊಂದು ವೀಶೆಷವಾದ ಉಡುಪು ಧರಿಸಿ ಬಟ್ಟೆಯ ಚುಂಗು ಹಾರಾಡುತ್ತಿದೆ. ಇಲ್ಲಿಯೂ ಸಹ ವೀರನ ಹಿಂಭಾಗದಲ್ಲಿ ಜಿಂಕೆಯನ್ನು ನಾಯಿಯು ಕಚ್ಚುತ್ತಿರುವಂತೆ ತೋರಿಸಲಾಗಿದೆ. ಇದರ ಮೇಲ್ಭಾದಲ್ಲಿ ಇನ್ನೊಬ್ಬ ಸೈನಿಕನ ಚಿತ್ರವನ್ನು ಸಣ್ಣದಾಗಿ ಬಿಡಿಸಿದ್ದಾರೆ.

**ಊರು : ಗೊರಬಾಳ್ (ಸಿಂಧನೂರು)** **ಸ್ಥಳ : ಚನ್ನಬಸವ ಮಠದ ಆವರಣದಲ್ಲಿ**

**ಶಿಲ್ಪ : ಜಿಂಕೆಬೇಟೆ ವೀರಗಲ್ಲುಗಳು** **ಅಭಿಮುಖ : ಪಶ್ಚಿಮಾಭಿಮುಖ**

**ಕಾಲ : ೧೬–೧೭ನೇ ಶತಮಾನ** **ಸ್ಥಿತಿ : ಉತ್ತಮ**

**ವಿವರಣೆ :** ಈ ವೀರಗಲ್ಲು ಒಂದು ಹಂತವನ್ನು ಒಳಗೊಂಡಿದೆ.





ತಾಲೂಕು ಕೇಂದ್ರದಿಂದ ಗೊರಬಾಳ ಗ್ರಾಮವು ೧೨ ಕಿ.ಮೀ. ದೂರದಲ್ಲಿದೆ. ಈ ಮಠದಲ್ಲಿ ನಾಲ್ಕು ವೀರಗಲ್ಲುಗಳಿದ್ದು, ಅದರಲ್ಲಿ ಒಂದು ಸಾಮನ್ಯ ವೀರಗಲ್ಲು ಅದರಲ್ಲಿ ಮೂರು ಜಿಂಕೆಬೇಟೆ ವೀರಗಲ್ಲುಗಳಿವೆ. ವೀರನು ಶಿರಮುಡಿಗೆ ಬಟ್ಟೆಕಟ್ಟಿದ್ದು ಅದು ಹಾರಾಡುವಂತೆ ಚಿತ್ರಿಸಲಾಗಿದೆ. ವೀರನು ಕೊರಳಲ್ಲಿ ಪದಕದ ಸರ ಮತ್ತು ತಾಯತದಂತಹ ಆಭರಣವನ್ನು ಧರಿಸಿದ್ದಾನೆ. ವೀರನು ಬಲಗೈಯಲ್ಲಿ ಇರಿಯುವ ಕತ್ತಿ, ಎಡಗೈಯಲ್ಲಿ ಬಂದೂಕನ್ನು ಹಿಡಿದು ಮುನ್ನುಗ್ಗುತ್ತಿದ್ದಂತೆ ತೋರಿಸಲಾಗಿದೆ. ವೀರನು ಸೊಂಟದಲ್ಲಿ ಬಾಕುವನ್ನು ಧರಿಸಿದ್ದಾನೆ. ಇವನ ಕಾಲುಗಳ ಮಧ್ಯಬಾಗದಲ್ಲಿ ನಾಯಿಯೊಂದು ಜಿಂಕೆಯನ್ನು ಓಡಿಸಿಕೊಂಡು ಹೋಗುತ್ತಿರುವ ಹಾಗೆ ಚಿತ್ರ ಬಿಡಿಸಲಾಗಿದೆ. ಈ ವೀರನ ಹಿಂಭಾಗದಲ್ಲಿ ಇನ್ನೊಂದು ವೀರನ ಶಿಲ್ಪವಿದೆ, ಅವನು ಬಲಗೈಯಲ್ಲಿ ಕತ್ತಿಯನ್ನು ಹಿಡಿದು ಕೊಂಡು ನಿಂತಿದ್ದಾನೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರ ಕೆತ್ತನೆಗಳಿವೆ.


ಎರಡನೆಯ ವೀರಗಲ್ಲು ವಿಶೇಷವಾದ ಭಂಗಿಯಲ್ಲಿ ನಿಂತಿದ್ದಾನ ಇವರು ಎಡಗೈಯಲ್ಲಿ ಬಂದೂಕು ಬಲಗೈಯಲ್ಲಿ ಇರಿಯುವ ಕತ್ತಿಯನ್ನು ಹಿಡಿದುಕೊಂಡು ನಿಂತಿದ್ದಾನೆ ಕೊರಳಲ್ಲಿ, ಸೊಂಟದಲ್ಲಿ ಆಭರಣಗಳನ್ನು ಧರಿಸಿದ್ದಾನೆ. ವೀರನ ಶಿರಮುಡಿ ಕಟ್ಟಿದ್ದು ಅದಕ್ಕೆ ಬಟ್ಟೆಯನ್ನು ಕಟ್ಟಿದ್ದಾನೆ. ವೀರನ ಎರಡು ಬುಜದ ಸ್ವಲ್ಪ ಮೇಲ್ಭಾಗದಲ್ಲಿ ಗಿಳಿಗಳನ್ನು ಬಿಡಿಸಿದ್ದಾರೆ. ವೀರನ ಹಿಂಭಾಗದಲ್ಲಿ ನಾಯಿಯು ಜಿಂಕೆಯನ್ನು ಕಚ್ಚುತ್ತಿರುವಂತೆ ಬಿಡಸಲಾಗಿದೆ.

ಮೂರನೆಯ ವೀರಗಲ್ಲು ಕೂಡ ಮೇಲೆ ವಿವರಿಸಿದ ಎರಡು ವೀರಗಲ್ಲುವಿನ ಲಕ್ಷಣವನ್ನು ಹೊಂದಿದೆ. ಇಲ್ಲಿ ವೀರನು ಬಲಗೈಯಲ್ಲಿ ಇರಿಯುವ ಕತ್ತಿ, ಎಡಗೈಯಲ್ಲಿ ಧ್ವಜವನ್ನು ಹಿಡಿದು ನಿಂತಿದ್ದಾನೆ. ಇಲ್ಲಿ ಜಿಂಕೆಯ ಮುಂದೆ ಮತ್ತು ಹಿಂದೆ ನಾಯಿಗಳು ಇದ್ದು, ಹಿಂದಿರುವ ನಾಯಿಯು ಜಿಂಕೆಯ ಬೆನ್ನನ್ನು ಬಾಯಿಯಿಂದ ಹಿಡಿದಿದೆ. ಮೇಲ್ಭಾಗದಲ್ಲಿ ಸೂರ್ಯ–ಚಂದ್ರ ಕೆತ್ತನೆಗಳನ್ನು ಬಿಡಿಸಿದ್ದಾರೆ.

**ಆನೆಯ ಬೇಟೆ ವೀರಗಲ್ಲು**

ಸೈನ್ಯದಲ್ಲಿ ಆನೆಗಳಿಗೆ ಬಹುಮುಖ್ಯ ಸ್ಥಾನವಿದ್ದಿತು. ಆನೆ ಪ್ರಾಣಿಗಳೆಲ್ಲೆಲ್ಲ ಪ್ರತಿಷ್ಠಿತ ಪ್ರಾಣಿ. ಕರ್ನಾಟಕವನ್ನು ಆನೆಯ ತವರೂರು ಎಂದರು ತಪ್ಪಾಗಲಾರದು. ಆನೆಯನ್ನು ಪಳಗಿಸಲು ಯಾವ ಕ್ರಮವನ್ನು ಅನುಸರಿಸುತ್ತಿದ್ದರೋ ತಿಳಿಯದು, ಆನೆಗಳು ಕಾಡಿನಿಂದ ಒಂಟೊಂಟಿಯಾಗಿ ಹೊರಬಂದು ಜನರನ್ನೂ ಬೆಳೆಗಳನ್ನು ನಾಶಪಡಿಸುತ್ತಿದ್ದ ವಿಷಯ ಶಾಸನಗಳಲ್ಲಿವೆ. ಈಗಿನ ಖೆಡ್ಡಾ ಕಾರ್ಯಕ್ರಮದಂತೆ ಅವುಗಳನ್ನು ಹಿಡಿಯುತ್ತಿದಂತೆ ಊಹಿಸಬಹುದು. ಇಂತಹ ಆನೆಗಳೊಂದಿಗೆ ಹೋರಾಡಿ, ಯುದ್ಧಕಾಲದಲ್ಲಿ ಅಲ್ಲದೆ ಇತರೆ ಸಮಯದಲ್ಲಿಯೂ ಹೋರಾಡಿ ಮಡಿದ ವೀರರ ಬಗ್ಗೆ ಕೆಲವು ಶಾಸನಗಳು ಉಲ್ಲೇಖಿಸುತ್ತವೆ.

ಆನೆಬೇಟೆಯಲ್ಲಿ ಹೆಚ್ಚಿನ ತಂತ್ರಗಾರಿಕೆ ಹಾಗೂ ಬೇಟೆಗಾರರ ಮತ್ತು ಪಳಗಿಸಿರುವ ಆನೆಗಳ ಸಹಾಯವೂ ಅವಶ್ಯಕ. ಇದು ಬೇರೆ ಪ್ರಾಣಿಗಳಂತೆ ಬೇಟೆಯಾಡುವುದು ಸುಲಭವಲ್ಲ. ಆನೆಬೇಟೆಯನ್ನು ರಾಜಮಹಾರಾಜರು ನಡೆಸಿದ ಬಗ್ಗೆ ದಾಖಲೆಗಳಿವೆ. ಆನೆಯಿಂದ ಮರಣ ಹೊಂದಿದ ವ್ಯಕ್ತಿಯ ಸ್ಮಾರಕಗಳು ಲಭ್ಯವಿದ್ದರೂ ಒಟ್ಟಾರೆಯಾಗಿ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತವೆ.



ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಗಿಣಿವಾರ ಎಂಬ ಗ್ರಾಮದಲ್ಲಿ ಆನೆಯನ್ನು ಬೇಟೆಯಾಡುವ ವೀರಗಲ್ಲು ದೊರಕಿದೆ. ಈ ಗ್ರಾಮವು ತಾಲೂಕು ಕೇಂದ್ರದಿಂದ ೩೦ ಕಿ.ಮೀ ದೂರದಲ್ಲಿದೆ. ಈ ವೀರಗಲ್ಲಿನ ವೀರನು ಎಡಕ್ಕೆ ನಿಂತಿದ್ದು, ಎರಡು ಕೈಯಲ್ಲಿ ಭರ್ಚಿಯನ್ನು

ಹಿಡಿದುಕೊಂಡು ಆನೆಯ ಎದೆಗೆ ಇರಿಯುತ್ತಿದ್ದಾನೆ. ಆನೆಯೂ ತನ್ನ ಸೊಂಡಿಲ್ಲನ್ನು ಮೇಲೆತ್ತಿ ಅವನ ವೀರನ ಕಡೆ ವೀರಾವೇಶದಿಂದ ದಾಳಿ ಮಾಡುತ್ತಿದೆ. ವೀರನ ಲಕ್ಷಣಗಳನ್ನು ಗಮನಿಸಿವುದಾದರೆ ವೀರನು ಶಿರಮುಡಿ ಕಟ್ಟಿದ್ದು ಅದು ಎಡದಿಂದ ಬಲಕ್ಕೆ ಇಳಿಜಾರಿನಂತಿದೆ. ಕೊರಳಿನಲ್ಲಿ ಹಾರ, ಕೈಗಡಗ, ತೋಳ್ಬಂದಿ, ಕಾಲ್ಗಡಗ, ವೀರಪಂಚೆಯು ಬಲಕ್ಕೆ ಎಡಕ್ಕೆ ಮತ್ತು ಎರಡು ಕಾಲುಗಳ ಮಧ್ಯಭಾಗದಲ್ಲಿ ಇಳಿಬಿದ್ದಿದೆ. ಸೊಂಟದಲ್ಲಿ ಕಿರುಗತ್ತಿ ಇರಿಸಿದ್ದಾನೆ. ಇವನ ಲಕ್ಷಣಗಳನ್ನು ಗಮನಿಸಿಸುವುದಾದರೆ ಇವನು ಆನೆಯನ್ನು ಪಳಗಿಸುವ ಮಾವುತನಿರಬೇಕು ಎನಿಸುತ್ತದೆ. ಈ ವೀರಗಲ್ಲುವಿನ ಮೇಲ್ಭಾಗದಲ್ಲಿ ತ್ರಿಶೂಲ, ಸೂರ್ಯ–ಚಂದ್ರರ ಕೆತ್ತನೆಗಳಿವೆ.

ಒಟ್ಟಾರೆಯಾಗಿ ಶಾಸನಶಿಲ್ಪಗಳಲ್ಲೂ ಕೂಡ ನಾವು ಹಲವಾರು ಪ್ರಾಣಿಗಳ ಬೇಟೆ ಚಿತ್ರಗಳನ್ನು ನೋಡಬಹುದು. ಬೇಟೆಯಾಡಲು ಮತ್ತೊಂದು ಕಾರಣವೂ ಇರುತ್ತದೆ. ಅದೇನೆಂದರೆ ಕೆಲವು ಪ್ರಾಣಿಗಳು ಊರಿಗೆ ನುಗ್ಗಿ ಜನಗಳಿಗೆ, ದನಗಳಿಗೆ ತೊಂದರೆ ಕೊಡುವುದಲ್ಲದೆ, ಕಷ್ಟದಿಂದ ಬೆಳೆದ ಬೆಳೆಗಳನ್ನು ನಾಶಪಡಿಸುತ್ತವೆ. ಇಂತಹ ಪ್ರಾಣಿಗಳ ಕಾಟವನ್ನು ತಡೆಯಲಾರದೆ ಅವಗಳನ್ನು ಬೇಟೆಯಾಡಿ ಕೊಂದುಹಾಕಿದ ಅಥವಾ ಕೊಲ್ಲಲು ಹೋಗಿ ತಾವೇ ಮರಣವನ್ನಪ್ಪಿದ ಘಟನೆಗಳನ್ನು ತಿಳಿಸುವ ಶಾಸನಗಳು ನಮ್ಮಲ್ಲಿ ದೊರೆಯುತ್ತವೆ. ಈ ರೀತಿ ಮರಣವನ್ನು ಹೊಂದಿದವರೂ ಕೂಡ ವೀರರು ಎಂದು ನಮ್ಮ ಜನ ನಂಬಿದ್ದರು. ಹೀಗಾಗಿ ಇವರಿಗೂ ವೀರಗಲ್ಲುಗಳನ್ನು ನೆಡುವ ರೂಢಿ ಬೆಳೆದು ಬಂದಿತು.

**ಆಕರ ಗ್ರಂಥಗಳು**


- ಕಲಬುರ್ಗಿ ಎಂ.ಎಂ., **ಸಮಾಧಿ–ಬಲಿದಾನ–ವೀರಮರಣ ಸ್ಮಾರಕಗಳು**. ಐಬಿಹೆಚ್ ಪ್ರಕಾಶನ, ಬೆಂಗಳೂರು, ೧೯೮೦
- ಚಿದಾನಂದಮೂರ್ತಿ ಎಂ., **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ,** ಸಪ್ನ ಬುಕ್ ಹೌಸ್, ಬೆಂಗಳೂರು ೨೦೨೦.
- ಚಿದಾನಂದಮೂರ್ತಿ ಎಂ., **ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು**, ಐಬಿಎಚ್ ಪ್ರಕಾಶನ ಬೆಂಗಳುರು, ೧೯೮೪
- ಪರಮಶಿವಮೂರ್ತಿ ಡಿ.ವಿ., **ಕನ್ನಡ ಶಾಸನಶಿಲ್ಪ**, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ. ೧೯೯೯
- ಶೇಷಶಾಸ್ತ್ರೀ ಆರ್., **ಕರ್ನಾಟಕ ವೀರಗಲ್ಲುಗಳು**, ಕಾಮದೇನು ಪುಸ್ತಕ ಭವನ, ಬೆಂಗಳೂರು, ೨೦೧೭
- ಕ್ಷೇತ್ರಕಾರ್ಯದ ಮಾಹಿತಿ